

ಎಚ್.ಎ. ಅನಿಲ್ ಕುಮಾರ್

# ಕನ್ನಡದ ಆಧುನಿಕಕ್ಕೊಂದು ಹೊಸ ದೃಶ್ಯವ್ಯಾಖ್ಯೆ

ಡಾ. ಶಿವಾನಂದ ಬಂಟನೂರ ಅವರ ಕೃತಿ 'ಸಮಕಾಲೀನ ಕನ್ನಡ ದೃಶ್ಯಕಲಾ ಸಾಹಿತ್ಯ' ಬಹಳ ಮುತುವರ್ಜಿಯಿಂದ ಮೂಡಿಬಂದಿರುವ ಒಂದು ದೃಶ್ಯ–ಸಂಕಥನ. ದೃಶ್ಯಕಲೆಯ ಕುರಿತು ಕನ್ನಡದಲ್ಲಿ ಪ್ರಕಟವಾಗಿರುವ ಲೇಖನ, ಪುಸ್ತಕಗಳ ಕುರಿತ ಒಂದು ಸುದೀರ್ಘ ಪರಿಚಯವಿದು. ಪರಿಚಯದ ನಂತರ ಅವುಗಳ ತಾತ್ವಿಕ ವಿಂಗಡಣೆಗಳ ಯತ್ನವೂ ಇದೆ. ಇಲ್ಲಿನ ಬರವಣಿಗೆಯು ಅಭಿನಂದನಾ ಹೊತ್ತಿಗೆ, ಸ್ಮರಣ ಸಂಚಿಕೆ, ಸಂಕೀರ್ಣ ಸಾಹಿತ್ಯ, ಉತ್ತರ–ದಕ್ಷಿಣ ಕರ್ನಾಟಕದ ಕಲಾವಿದ ಕೇಂದ್ರಿತ ಸಾಹಿತ್ಯ, ಹೊರರಾಜ್ಯ–ದೇಶಗಳ ಕಲಾವಿದ ಕೇಂದ್ರಿತ ಸಾಹಿತ್ಯ, ಅನುವಾದಗಳು, ಚರಿತ್ರೆ, ವಿಮರ್ಶೆ, ಆತ್ಮಚರಿತ್ರೆ, ಪ್ರವಾಸ ಕಥನ, ದೃಶ್ಯಕಲಾ ಪತ್ರಿಕೆ ಹಾಗೂ ಪ್ರದರ್ಶನಗಳ ಕೆಟಲಾಗುಗಳನ್ನು ವಿಂಗಡಣೆಗಳನ್ನು ಮಾಡಿ, ಅವುಗಳನ್ನು ವಿಶ್ಲೇಷಣಾತ್ಮಕವಾಗಿ ಪರಿಚಯಿಸಲಾಗಿದೆ. ಇದು ಪರಿಚಯಾತ್ಮಕವಾದ ವಿಶ್ಲೇಷಣೆ ಆಗಿದ್ದಲ್ಲಿ ಈ ಪುಸ್ತಕದ ಒಗರು ಹಾಗೂ ಸ್ವಾದ ಅನಿವಾರ್ಯವಾಗಿ ಬೇರೆಯೇ ಆಗಿರುತ್ತಿತ್ತು. ಇದೊಂದು ಆಯ್ಕೆಯ ಪ್ರಶ್ನೆಯಷ್ಟೇ.

ಇದೊಂದು ದೃಶ್ಯ ಸಂಪ್ರದಾಯದ ಸಂಕೀರ್ಣ ಅಕ್ಷರ ಪರಿಚಯ. ಕೆಲವು ಕಡೆ, ಮುಖ್ಯವೆನಿಸುವ ಬರಹಗಳನ್ನು ಪುಟಗಟ್ಟಲೆ ಉದ್ಧರಿಸಿ ಪರಿಚಯ ನೀಡುವ ಶೈಕ್ಷಣಿಕ ವೈಶಾಲ್ಯವೂ ಇಲ್ಲಿದೆ. ಕಳೆದ ಸುಮಾರು ಅರ್ಧದಶಕದ ಕನ್ನಡ ಕಲಾಸಾಹಿತ್ಯದ ಪರಿಚಯ ಇದರ ಮುಖ್ಯ ಉದ್ದೇಶ. 'ಪರಿಚಯ'ವೇ ಆತ್ಮವಾಗಿರುವ ಈ ಪುಸ್ತಕವು ಮೊದಲಿಗೆ 'ಕಲೆ ಬೇರೆ, ಕಲಾಸಾಹಿತ್ಯ ಬೇರೆ' ಎಂಬ ಸ್ಪಷ್ಟ ನಿಲುವನ್ನು ಹೊಂದಿದೆ ಅಥವ ಅಂತಹ ಒಂದು ನಂಬಿಕೆಯ ಸಂಪ್ರದಾಯದ ಬಹು ಒಳ್ಳೆಯ ಮುಂದುವರಿಕೆಯಾಗಿದೆ. ಇದೊಂದು, ಕನ್ನಡದಲ್ಲಿ ಸ್ವೀಕೃತವಾಗಿರುವ ಮಾದರಿಯೂ ಹೌದಾಗಿದೆ. ಈ ವಿಂಗಡಣೆಯು ಅಂತರರಾಷ್ಟ್ರೀಯ ಹಂತದ ಆಧುನಿಕ ಕಲೆಯ ಮೂಲ ಮಾದರಿಯೂ ಹೌದು.

***

ಬಂಟನೂರರ ಬರವಣಿಗೆಯು ಸಾಹಿತ್ಯಪ್ರಣೀತ ಶೈಕ್ಷಣಿಕ ಶಿಸ್ತಿನ ಸ್ಪಷ್ಟ ಪರಿಚಯವಿರುವ, ಒಳಗಿನವರೇ ಆಗಿರುವವರು ಜನಪ್ರಿಯ ಸಾಹಿತ್ಯ ಪ್ರಕಾರದ ಸತ್ವದ ಅವಶ್ಯಕತೆಯನ್ನು ಗುರ್ತಿಸಿ ಸರಳವಾದರೂ ತೀಕ್ಷ್ಣವಾದ ವಿವರವನ್ನು ನೀಡುವ ಶೈಲಿ. ಒಮ್ಮೆ ಶೈಕ್ಷಣಿಕ ಮತ್ತು ಜನಪ್ರಿಯ ಎಂಬ ಎರಡು ಅಂಶಗಳು ಇಲ್ಲಿ ಕೆಲವೊಮ್ಮೆ ಕವಚವಾಗಿ, ಹಲವೊಮ್ಮೆ ತಿರುಳಾಗಿ, ಪರಸ್ಪರ ಪಾತ್ರವನ್ನು ಇಲ್ಲಿನ ಬರವಣಿಗೆಯ ಸಾದ್ಯಂತವಾಗಿ ಬದಲಿಸಿಕೊಳ್ಳುತ್ತಲೇ ಸಾಗುತ್ತವೆ. ಬಹುವಾಗಿ ಕನ್ನಡದ ಕಲಾಸಾಹಿತ್ಯವು ಸಂಖ್ಯೆಯ ದೃಷ್ಟಿಯಲ್ಲಿ ಶೈಕ್ಷಣಿಕತೆಯ ಹೊರಗಿನವರು ಬರೆದಂತಹದು (ಶಿವರಾಮ ಕಾರಂತರಿಂದ, ಕೃಷ್ಣ ಸೆಟ್ಟಿ, ಸುಬ್ರಮಣ್ಯಮ್, ಚಿಂತಾಮಣಿ ಅವರವರೆಗೂ). ಇದಕ್ಕೆ ಮತ್ತೊಂದು ಕಾರಣವೆಂದರೆ, ಸ್ವತಃ ಕಲಾವಿದರುಗಳೇ ಹೆಚ್ಚಾಗಿ ಕಲಾಬರಹದಲ್ಲಿ ತೊಡಗಿಕೊಂಡಿರುವುದು. ಕೆಲವೊಮ್ಮೆ ಅನ್ಯರು,